# ನೂರು ವರ್ಷ ದಾಟಿದ ಸೇತುವೆ

ಸರ್.ಎಂ.ವಿಶ್ವೇಶ್ವರಯ್ಯನವರ ಕಾರ್ಯಚತುರತೆ ಹಾಗೂ ನೈಪುಣ್ಯದಿಂದ ನಿರ್ಮಿಸಿದ ಸೇತುವೆಯೊಂದು ಮಲೆನಾಡಿನಲ್ಲಿ ದ್ವಿಶತಕದತ್ತ ದಾಪುಗಾಲು ಹಾಕಿದೆ. ಉತ್ತಮ ಗುಣಮಟ್ಟದ ಉತ್ಪನ್ನ ಬಳಸಿರುವುದರಿಂದ ಇಷ್ಟೊಂದು ಬಾಳಿಕೆ ಬರಲು ಸಾಧ್ಯವಾಗಿದೆ.

★ -ವಿ. ಬಾಲಕೃಷ್ಣ ಶಿರ್ವ



ಮಂಗಳೂರು ಗಡಿಭಾಗದ ಮೂಲರಪಟ್ಣದಲ್ಲಿ ಫಲ್ಗುಣಿ ನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆಗೆ ಆದದ್ದು ಕೇವಲ 30 ವರ್ಷ. ಇತ್ತೀಚೆಗೆ ಈ ಸೇತುವೆ ಕುಸಿದು ಬಿದ್ದಿದೆ. ಇದನ್ನು 1981–82ರಲ್ಲಿ 176.40ಮೀ ಉದ್ದದಷ್ಟು ಕಟ್ಟಸಿದಿದ್ದು, ಸೇತುವೆಯಲ್ಲಿ ಒಟ್ಟು 8 ಸ್ಲ್ಯಾಬ್‌ಗಳಿದ್ದವು. ಸೇತುವೆ ಮೇಲ್ಭಾಗದಲ್ಲಿ ಎರಡು ಕಡೆಗಳಲ್ಲಿ ಬಿರುಕು ಬಿಟ್ಟಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದ್ದು, ಆಗಲೇ ಸೇತುವೆಯ ಅಡಿಭಾಗದ ಸರಳುಗಳು ತುಕ್ಕು ಹಿಡಿದಿತ್ತು. ನೂರು (100) ವರ್ಷ ಬಾಳಿಕೆ ಬರಬೇಕಾಗಿದ್ದ ಸೇತುವೆ ಮೂವತ್ತು (30) ವರ್ಷ ಕಳೆಯುತ್ತಲೇ ಕುಸಿತಕ್ಕೊಳಗಾಗಿದ್ದು ಅದರ ಗುಣಮಟ್ಟದ ಕೊರತೆಯನ್ನು ಸಾಬೀತುಪಡಿಸಿದ್ದಲ್ಲದೆ ನಿರ್ಮಾಣದ ಯೋಜನೆ ಎಷ್ಟು ಕೆಳಮಟ್ಟದ್ದಾಗಿತ್ತು ಎಂಬುದನ್ನು ಜಾಹೀರುಗೊಳಿಸಿದೆ.

ಇದಕ್ಕೆ ತದ್ವಿರುದ್ಧವಾಗಿ ತೀರ್ಥಹಳ್ಳಿಯಿಂದ ಕುರುವಳ್ಳಿ ಸಂಪರ್ಕಿಸುವ (ಎನ್.ಎಚ್.13) ಸೇತುವೆ ಈಗಾಗಲೇ ನೂರು ವರ್ಷ ಪೂರೈಸಿದ್ದು ಈಗಲೂ ಗಟ್ಟಿಯಾಗಿ ಸುಭದ್ರವಾಗಿದೆ. ಇದು ಇನ್ನೂ ಒಂದು ಶತಕ ಪೂರೈಸಿದರೂ ಅಚ್ಚರಿ ಪಡಬೇಕಿಲ್ಲ. ಈ ಸೇತುವೆ ಮೈಸೂರು ಮಹಾರಾಜರ ಆಡಳಿತಾವಧಿಯಲ್ಲಿ ವಿಶ್ವೇಶ್ವರಯ್ಯನವರ ಚತುರತೆ, ದಕ್ಷತೆಯಿಂದ ಕಟ್ಟಲ್ಪಟ್ಟಿದ್ದು ಅತ್ಯಮೋಘವಾಗಿದೆ. ಗಟ್ಟಿಯಾದ ಹೆಬ್ಬಂಡೆಯನ್ನೇ ಬೆಡ್ ಆಗಿಸಿ ಅದರ ಮೇಲೆ ಸೈಜ್ ಕಲ್ಲಿನಿಂದ ಆಧಾರಸ್ತಂಭ ಲಂಬವಾಗಿ ನಿರ್ಮಿಸಲ್ಪಟ್ಟಿದೆ. ಕಟ್ಟಿದ ಕಲ್ಲುಗಳು ಸದೃಢವಾಗಿದ್ದು, ಇಕ್ಕೆಲಗಳಲ್ಲಿ ಸುಮಾರು ಹನ್ನೆರಡು ಸ್ತಂಭಗಳಿವೆ. ಅವುಗಳ ನಡುವಿನ ಅಂತರ ಬಹುಪಾಲು 10 ಮೀಟರ್ ಆಗಿರುತ್ತದೆ ಎಂಬುದು ತೀರ್ಥಹಳ್ಳಿಯ ಜೂನಿಯರ್ ಎಂಜಿನಿಯರ್ ಸುಬ್ಬಣ್ಣರವರ ಅನಿಸಿಕೆ.

ಸೇತುವೆ ಸುಭದ್ರತೆಗಾಗಿ ಸ್ಪಾಂಡ್ರಿಲ್ ಕಮಾನು ಹಾಕಲಾಗಿದ್ದು, ಇದು ಸ್ಟ್ರಿಂಗ್ ಆ್ಯಕ್ಷನ್ ನೀಡುತ್ತದೆ ಎನ್ನುವುದು ಸುಬ್ಬಣ್ಣನವರ ಅಭಿಮತ. 100 ಮೀಟರ್‌ಗೂ ಅಧಿಕ ಉದ್ದವುಳ್ಳದ್ದಾಗಿದ್ದು, ಒಳ ವಿಸ್ತೀರ್ಣ 8.4ಮೀಟರ್ ಆಗಿರುತ್ತದೆ. ಸೇತುವೆಯ ಮೇಲ್ಮೈಯಿಂದ ಡೆಕ್ಸ್ಲ್ಯಾಬ್ ಹಾಕಲಾಗಿದೆ.

ತೀರ್ಥಹಳ್ಳಿ ಕುರುವಳ್ಳಿಯ ಸಂಪರ್ಕ ಸೇತುವೆಯನ್ನು ನೋಡದೆ ಹೋದರೆ ತೀರ್ಥಹಳ್ಳಿ ಭೇಟಿ ಅಪೂರ್ಣ ಎಂದೇ ಹೇಳಬೇಕು. 30 ವರ್ಷಗಳಲ್ಲೇ ಕುಸಿಯುವ ಸೇತುವೆಗಳ ನಡುವೆ ವಿಶ್ವೇಶ್ವರಯ್ಯನವರಿಂದ ನಿರ್ಮಿಸಲ್ಪಟ್ಟ ಈ ಸೇತುವೆ ಮಾದರಿ. ಅಷ್ಟೇ ಅಲ್ಲ ವಿಶ್ವೇಶ್ವರಯ್ಯನವರು ವಿಶ್ವವಿಖ್ಯಾತರಾಗಲು ಕೆ.ಆರ್.ಎಸ್. ಅಣೆಕಟ್ಟು ಮತ್ತು ಇಂತಹ ಸೇತುವೆಗಳೇ ಸಾಕ್ಷಿಯಾಗಿವೆ.